# ತಪಸ್ಯೆಯಲ್ಲಿಯೇ ಆನಂದವನ್ನು ಕಂಡ

# ಮಹಾಚೇತನ

ಸ್ವಾಮಿ ಆಶುತೋಷಾನಂದ



**(ಹಿಂದಿನ ಸಂಚಿಕೆಯಿಂದ)**

**ಪೂ**ಜ್ಯ ಸ್ವಾಮಿ ತಪಸ್ಯಾನಂದಜಿ ಅವರಲ್ಲಿ ನಾನು ಕಂಡುಕೊಂಡ ಇನ್ನೊಂದು ಗಮನಾರ್ಹ ಸದ್ಗುಣವೆಂದರೆ, ಇತರರನ್ನು ತುಂಬು ಗೌರವದಿಂದ ನೋಡುವುದು. ಒಬ್ಬ ಬ್ರಹ್ಮಚಾರಿಯನ್ನು ಭೇಟಿಮಾಡಲು ಇಚ್ಛಿಸಿದಾಗಲೂ ಅವರು, "ಅವನನ್ನು ಬರಲು ಹೇಳು" ಎಂಬ ರೀತಿಯ ಆದೇಶವನ್ನು ಇತ್ತವರಲ್ಲ. ಅದಕ್ಕೆ ಬದಲಾಗಿ, "ನಿನಗೆ ಪುರುಸೊತ್ತಾದಾಗ ಬಂದುಕಾಣು" ಎನ್ನುವ ರೀತಿಯ ಸಂದೇಶಗಳನ್ನೇ ಕಳಿಸುತ್ತಿದ್ದರು.

ಹಾಗೂ, ಅವರೆಂದೂ ಇತರರ ಭಾವನೆಗಳಿಗೆ ಧಕ್ಕೆಯಾಗುವಂತಹ ಭಾಷೆಯನ್ನು ಬಳಸಿದ್ದನ್ನು ನಾನು ಕೇಳಿಯೇ ಇಲ್ಲ ಎನ್ನಬೇಕು. ಕೋಪಗೊಂಡಾಗ, ಅತಿರೇಕದ ಸ್ಥಿತಿಯಲ್ಲಿ, "ಉಪಯೋಗವಿಲ್ಲದವರು. ನಿಮಗೆ ಮಿದುಳೇ ಇಲ್ಲ" ಎಂದು ಬೈಯುತ್ತಿದ್ದರು, ಅಷ್ಟೇ. ಆದರೆ ಅವರ ಈ ಮಾತುಗಳಿಂದ ನಮ್ಮ ಮನಸ್ಸಿಗೆಂದೂ ನೋವುಂಟಾಗುತ್ತಿರಲಿಲ್ಲ. ಅದಕ್ಕೆ ಬದಲಾಗಿ, ಅವರ ಕೆಲವು ಬೈಗುಳಗಳನ್ನು ನಾವು ಚೆನ್ನಾಗಿಯೇ ಆನಂದಿಸುತ್ತಿದ್ದೆವು. ಸಾಧುಬ್ರಹ್ಮಚಾರಿಗಳು ಮಾತ್ರವಲ್ಲ, ಮಠದಲ್ಲಿ ಕೆಲಸ ಮಾಡುವ ಉದ್ಯೋಗಿಗಳು ಮತ್ತು ಭಕ್ತರಿಗೆ ಕೂಡ ಇದೇ ರೀತಿ ಅನ್ನಿಸುತ್ತಿತ್ತು.

ಪೂಜ್ಯ ಸ್ವಾಮಿ ತಪಸ್ಯಾನಂದಜಿ ಮಹಾರಾಜ್ ಅವರು ಯಾವತ್ತೂ ಪ್ರಾಮುಖ್ಯತೆಯನ್ನು ಬಯಸಿದವರಲ್ಲ. ಅವರು ಸಾಮಾನ್ಯವಾಗಿ ಮಧ್ಯಾಹ್ನ ೧೨.೩೦ಕ್ಕೆ ಊಟದ ಮನೆಗೆ ಬರುವರು. ಅಷ್ಟರಲ್ಲಿ ಇತರ ಸಾಧುಬ್ರಹ್ಮಚಾರಿಗಳು ತಮ್ಮ ಊಟವನ್ನು ಮುಗಿಸಿರುತ್ತಿದ್ದರು. ತಮ್ಮ ತಟ್ಟೆಯಲ್ಲಿ ಬಟ್ಟಲುಗಳಲ್ಲಿ ಇಟ್ಟಿರುತ್ತಿದ್ದ ಆಹಾರವನ್ನು ತಾವೇ ಬಡಿಸಿಕೊಳ್ಳುತ್ತಿದ್ದರು. ತಮಗಾಗಿ ಇತರರು ಕಾಯುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಉಪ್ಪು ಮೊದಲಾದ ಯಾವುದೇ ಪದಾರ್ಥ ತಟ್ಟೆಯಲ್ಲಿ ಕಾಣದೇ ಹೋದರೆ, ಅವರು ಅದಕ್ಕಾಗಿ ಯಾರನ್ನೂ ಕೂಗಿ ಕರೆಯುತ್ತಿರಲಿಲ್ಲ. ತಾವೇ ಅಡುಗೆಯ ಮನೆಗೆ ಹೋಗಿ, ಬಡಿಸಿಕೊಂಡು ಬರುತ್ತಿದ್ದರು.

ಪೂಜ್ಯ ಸ್ವಾಮೀಜಿಯವರಿಗೆ ಬೇರೆಯವರು ತಮ್ಮ ಸೇವೆ ಮಾಡುವುದು ಎಳ್ಳಷ್ಟೂ ಇಷ್ಟವಾಗುತ್ತಿರಲಿಲ್ಲ. ಅವರು ಆ ಸಮಯದಲ್ಲಿ ಬಹಳ ಹಿರಿಯ ಸಂನ್ಯಾಸಿಗಳಾಗಿದ್ದರು ಮತ್ತು ಚೆನ್ನೈ ಮಠದ ಅಧ್ಯಕ್ಷರಾಗಿದ್ದರು ಎನ್ನುವುದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಒಮ್ಮೆ ಅವರು ವಿಪರೀತ ಜ್ವರ ಬಂದು ಮಲಗಿದ್ದರು. ಅದು ನಮಗೆ ಗೊತ್ತಾದದ್ದು ಜ್ವರದ ತಾಪಮಾನ ೧೦೨ ಡಿಗ್ರಿ ಫಾರನ್‌ಹೀಟ್ ತಲುಪಿದಾಗಲೇ. ಇದಕ್ಕೆ ಮೊದಲು, ಜ್ವರ ಇದ್ದಾಗಲೂ, ಅವರು ಸ್ನಾನ ಮಾಡುತ್ತಿದ್ದರು, ತಮ್ಮ ಕೆಲಸಕಾರ್ಯಗಳಿಗೆ ಗಮನ ಕೊಡುತ್ತಿದ್ದರು ಮತ್ತು ಬರವಣಿಗೆಯ ಕಾರ್ಯವನ್ನೂ ಮಾಡುತ್ತಿದ್ದರು. ಜ್ವರದಿಂದ ನಿಶ್ಶಕ್ತರಾಗಿ ಹಾಸಿಗೆಯ ಮೇಲೆ ಮಲಗಿದ್ದಾಗ, ಒಮ್ಮೆ ದೇಹಬಾಧೆ ವಿಪರೀತವಾಗಿ, ನೆಲದ ಮೇಲೆಯೇ ವಾಂತಿ ಮಾಡಿಕೊಳ್ಳುವಂತೆ ಆಯಿತು. ಅದೃಷ್ಟವಶಾತ್ ನಾನು ಆ ಸಮಯದಲ್ಲಿ ಅಲ್ಲಿಯೇ ಇದ್ದೆ. ಒಡನೆಯೇ ಒಂದು ಬೋಗುಣಿಯನ್ನು ತರಲು ಧಾವಿಸಿದೆ. ಬೋಗುಣಿಯನ್ನು ಅವರ ಬಾಯಿಯ ಹತ್ತಿರ ಹಿಡಿದೆ. ಆದರೆ ನನ್ನಿಂದ ಈ ಸೇವೆ ಮಾಡಿಸಿಕೊಳ್ಳಲು ಅವರಿಗೆ ಇಷ್ಟವೇ ಇರಲಿಲ್ಲ. ಸ್ವಾಮೀಜಿ ತಮ್ಮ ಕೈಗಳಿಂದ ನನ್ನನ್ನು ಆಚೆಗೆ ದೂಡಿದರು. ಆ ಬೋಗುಣಿಯನ್ನು ಎರಡೂ ಕೈಗಳಲ್ಲಿ ತಾವೇ ಹಿಡಿದುಕೊಂಡರು! ಇದೊಂದು ಅಲ್ಪ ಘಟನೆಯೆಂದು ಅನ್ನಿಸಬಹುದು. ಆದರೆ ನನ್ನ ಮನಸ್ಸಿನ ಮೇಲೆ ಇದು ಅಗಾಧ ಪ್ರಭಾವವನ್ನು ಉಂಟುಮಾಡಿತು.

ಸಂನ್ಯಾಸಿಗಳಾಗಲಿ ಅಥವಾ ಭಕ್ತರಾಗಲಿ ವಿನಾಕಾರಣ ತಮ್ಮ ಮುಂದೆ ಸುತ್ತುವರೆದಿರುವುದು ಸ್ವಾಮೀಜಿಯವರಿಗೆ ಇಷ್ಟವಾಗುತ್ತಿರಲಿಲ್ಲ. ಮಠದಿಂದ ತೆರಳುವಾಗ ಅಥವಾ ಮಠಕ್ಕೆ ಮತ್ತೆ ವಾಪಸ್ಸು ಬರುವಾಗ, ಪೂಜ್ಯ ಸ್ವಾಮೀಜಿಯವರಿಗೆ ಎಲ್ಲ ಸಾಧುಬ್ರಹ್ಮಚಾರಿಗಳೂ ಪ್ರಣಾಮ ಮಾಡುತ್ತಿದ್ದುದು ಒಂದು ಪದ್ಧತಿಯೇ ಆಗಿತ್ತು. ಸ್ವಾಮೀಜಿಯವರು ಇದನ್ನೂ ಇಷ್ಟಪಡುತ್ತಿರಲಿಲ್ಲ. ಒಮ್ಮೊಮ್ಮೆ ಅವರು ಹಾಸ್ಯವಾಗಿ ಹೀಗೆ ಹೇಳುತ್ತಿದ್ದರು: "ನಿಮಗೆ ಓದಿನ ಹವ್ಯಾಸ ಇಲ್ಲ. ಕೆಲಸದಲ್ಲಿ ತನ್ಮಯತೆ ಇಲ್ಲ. ಇವುಗಳಿಲ್ಲದ ಮೇಲೆ ಇನ್ನೇನು ಕೆಲಸ? ಸರಿ, ಹಾಗಾದರೆ. ಈ ಮುದುಕ ಸಂನ್ಯಾಸಿ ಹೊರಗೆ ಹೋಗುತ್ತಿದ್ದಾನೆ. ಬನ್ನಿ, ಎಲ್ಲರೂ ಹೋಗೋಣ. ಪ್ರಣಾಮಗಳನ್ನು ಸಲ್ಲಿಸೋಣ. ಈ ರೀತಿಯಲ್ಲಿಯೇ ನೀವು ನಿಮ್ಮ ಸಮಯವನ್ನು ಹಾಳುಮಾಡಿಕೊಳ್ಳುವುದು."

ಇದೇ ರೀತಿಯಲ್ಲಿ, ಯಾವುದೇ ಸಾಧು ಅಥವಾ ಬ್ರಹ್ಮಚಾರಿಯಾಗಲಿ, ರೈಲ್ವೆ ನಿಲ್ದಾಣ ಅಥವಾ ವಿಮಾನ ನಿಲ್ದಾಣಕ್ಕೆ ತಮ್ಮನ್ನು ಸ್ವೀಕರಿಸಲಾಗಲಿ ಅಥವಾ ಬೀಳ್ಕೊಡುವುದಕ್ಕಾಗಲಿ ಬರುವುದನ್ನು ಸ್ವಾಮೀಜಿ ಇಷ್ಟಪಡುತ್ತಿರಲಿಲ್ಲ. ಅವರು ಹೀಗೆ ಹೇಳುತ್ತಿದ್ದರು: "ಕಾರ್ ಕಳಿಸಿ, ಸಾಕು. ಡ್ರೈವರ್ ನನ್ನ ಸಾಮಾನನ್ನು ತೆಗೆದುಕೊಂಡು ಬರಲು ಸಹಾಯ ಮಾಡುತ್ತಾನೆ. ಇಷ್ಟೇ ತಾನೇ ಆವಶ್ಯಕತೆ ಇರುವುದು."

ಮುಂಚಿನ ದಿನಗಳಲ್ಲಿ ಸ್ವಾಮೀಜಿ ಬೇಲೂರು ಮಠಕ್ಕೆ ರೈಲಿನಲ್ಲಿ ಒಬ್ಬರೇ ಪ್ರಯಾಣ ಮಾಡುತ್ತಿದ್ದರು. ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳು ಮತ್ತಿತರ ಟ್ರಸ್ಟಿಗಳು ಬಹಳ ಒತ್ತಾಯ

ಮಾಡಿದ್ದರಿಂದ ವಿಮಾನದಲ್ಲಿ ಪಯಣಿಸಲು ಒಪ್ಪಿಕೊಂಡರು. ಆದರೂ ಅವರ ಜೊತೆಗೆ ಇನ್ನೊಬ್ಬರು ಬರುವುದಕ್ಕೆ ಸುತರಾಂ ಒಪ್ಪಲೇ ಇಲ್ಲ! ಅವರ ಕಾಲುಗಳು ಊದಿಕೊಂಡಿದ್ದವು. ಹೀಗಾಗಿ ನಡೆಯುವುದು ಮತ್ತು ಬಗ್ಗುವುದು ಅವರಿಗೆ ತುಂಬ ಕಷ್ಟವಾಗುತ್ತಿತ್ತು. ಇಂಥ ಅವಸ್ಥೆಯಲ್ಲಿ ಅವರೊಬ್ಬರೇ ಪ್ರಯಾಣ ಮಾಡಬಾರದೆಂದು ಬಹಳ ಜನರು ಅಭಿಪ್ರಾಯಪಟ್ಟಿದ್ದರು. ಆದರೆ ಸ್ವಾಮೀಜಿ ತಾವೊಬ್ಬರು ಪ್ರಯಾಣ ಮಾಡುವುದನ್ನೇ ಆಯ್ಕೆಮಾಡಿಕೊಳ್ಳುತ್ತಿದ್ದರು.

ಬೇಲೂರು ಮಠಕ್ಕೆ ಭೇಟಿ ಇತ್ತ ಅಂಥ ಒಂದು ಸಂದರ್ಭದಲ್ಲಿ, ರಾಮಕೃಷ್ಣ ಮಹಾಸಂಘದ ಒಬ್ಬ ಸಹಾಯಕ ಕಾರ್ಯದರ್ಶಿಗಳು ಅವರನ್ನು ಭೇಟಿಯಾಗಲು ಬಂದರು. ಪ್ರಯಾಣದ ಸಮಯದಲ್ಲಿ ಒಬ್ಬ ಸಹಾಯಕನನ್ನು ಕರೆತರುವ ವಿಷಯವನ್ನು ಮತ್ತೆ ಎತ್ತಿದರು. ನಿರೀಕ್ಷೆಯಂತೆಯೇ, ಸ್ವಾಮೀಜಿ ಈ ಪ್ರಸ್ತಾವವನ್ನು ತಳ್ಳಿಹಾಕಿದರು. ಆದರೆ ಆ ಸಹಾಯಕ ಕಾರ್ಯದರ್ಶಿಗಳು ಒತ್ತಾಯ ಮಾಡುತ್ತಲೇ ಇದ್ದರು. ಸ್ವಾಮೀಜಿ ತಮ್ಮದೇ ಆದ ಸ್ವಾಭಾವಿಕ ಶೈಲಿಯಲ್ಲಿ ಹೀಗೆ ಉತ್ತರವಿತ್ತರು: "ನಾನು ಬಿದ್ದುಹೋದರೆ, ನನಗೆ ಸಹಾಯ ಮಾಡಲು ಒಬ್ಬ ಸಂಗಾತಿಯನ್ನು ಜೊತೆಗೆ ಕರೆದುಕೊಂಡು ಬರುವಂತೆ ನೀವು ಹೇಳುತ್ತಿದ್ದೀರಿ, ಅಲ್ಲವೇ? ಈ ಪರಿಸ್ಥಿತಿಯನ್ನು ನಾನೀಗ ವಿವರಿಸುತ್ತೇನೆ. ನಾನೊಬ್ಬ ವೃದ್ಧ, ಅದರಲ್ಲೂ ಒಬ್ಬ ಸಂನ್ಯಾಸಿ. ನಾನು ಕೆಳಕ್ಕೆ ಬಿದ್ದರೆ, ಸಹಪ್ರಯಾಣಿಕರಲ್ಲಿ ಯಾರಾದರೂ ಖಂಡಿತ ನನ್ನ ಸಹಾಯಕ್ಕೆ ಬಂದೇ ಬರುತ್ತಾರಲ್ಲವೇ? ತುರ್ತುಸ್ಥಿತಿಯ ಸಂದರ್ಭದಲ್ಲಿ ಒಬ್ಬ ವೃದ್ಧ ಸಂನ್ಯಾಸಿಗೆ ಯಾರೂ ಸಹಾಯ ಮಾಡದಷ್ಟು ಭಾರತದಲ್ಲಿ ಇನ್ನೂ ಪರಿಸ್ಥಿತಿ ಹದಗೆಟ್ಟಿಲ್ಲ. ಆದ್ದರಿಂದ, ವಿಮಾನಕ್ಕೆ ೨,೦೦೦/– ರೂಪಾಯಿಗಳನ್ನು ಖರ್ಚುಮಾಡಿ, ಒಬ್ಬ ಸಂನ್ಯಾಸಿಯನ್ನು ಅದಕ್ಕಾಗಿ ಕರೆತರುವ ಆವಶ್ಯಕತೆ ಇಲ್ಲ. ಆಯಿತು, ಒಬ್ಬ ಸಂನ್ಯಾಸಿ ನನ್ನ ಸಂಗಡವೇ ಇದ್ದಾನೆ ಎಂದುಕೊಳ್ಳಿ. ಅವನು ಏನು ತಾನೇ ಮಾಡಬಲ್ಲ? ನಾನು ಕೆಳಕ್ಕೆ ಬೀಳುವ ತನಕ, ಅದನ್ನು ತಡೆಯಲು, ಅವನೇನೂ ಮಾಡಲಾರನಷ್ಟೇ!" ಹೀಗೆಂದು ಹೇಳಿ, ಸ್ವಾಮೀಜಿ ನಗಲಾರಂಭಿಸಿದರು. ಇತರರೂ ಆ ನಗುವಿನಲ್ಲಿ ಪಾಲ್ಗೊಂಡರು. ಇದಾಗಿ ಹಲವಾರು ತಿಂಗಳುಗಳ ನಂತರ, ಅನೇಕರು ಮತ್ತೆ ಮತ್ತೆ ಬೇಡಿಕೊಂಡ ನಂತರವಷ್ಟೇ, ತಮ್ಮ ಕಾರ್ಯದರ್ಶಿ ಸ್ವಾಮಿಗಳು ತಮ್ಮ ಜೊತೆಗೆ ಪಯಣಿಸಲು ಸ್ವಾಮೀಜಿ ಒಪ್ಪಿಗೆ ಕೊಟ್ಟರು.

ಸರಳತೆ ಎನ್ನುವುದು ಪೂಜ್ಯ ಸ್ವಾಮಿ ತಪಸ್ಯಾನಂದಜಿ ಮಹಾರಾಜರ ವ್ಯಕ್ತಿತ್ವಕ್ಕೆ ಭೂಷಣಪ್ರಾಯವಾಗಿತ್ತು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಅವರು ಭಕ್ತರಿಗೆ ಮಂತ್ರದೀಕ್ಷೆಯನ್ನು ನೀಡಲು ಬಹಳಷ್ಟು ದೂರ ಪ್ರಯಾಣ ಮಾಡಬೇಕಾಗಿತ್ತು. ಅವರ ಆವಶ್ಯಕತೆಗಳನ್ನು ನೋಡಿಕೊಳ್ಳಲು, ಒಬ್ಬ ಸಂನ್ಯಾಸಿಗಳನ್ನು ನಿಯುಕ್ತಿ ಮಾಡಲಾಯಿತು. ಅಲ್ಲಿಯವರೆಗೆ ಅವರ ಹತ್ತಿರ ಇದ್ದ ಬಟ್ಟೆಗಳೆಂದರೆ, ಎರಡು ಪಂಚೆ, ಎರಡು ಅಂಗಿಗಳು ಮತ್ತು ಮೇಲುಹೊದಿಕೆಗಳು ಮಾತ್ರ. ಅವರು ಉಪಯೋಗಿಸುತ್ತಿದ್ದುದು ಲೈಫ್‌ಬಾಯ್ ಸೋಪನ್ನು ಮಾತ್ರ. ಅದು ಅತ್ಯಂತ ಪುಟಾಣಿ ಚೂರಾಗಿ ಕರಗುವವರೆಗೂ ಉಪಯೋಗಿಸದೆ ಬಿಡುತ್ತಿರಲಿಲ್ಲ. ತದನಂತರವೂ ಅವರು ಅದನ್ನು ಬಿಸಾಡುತ್ತಿರಲಿಲ್ಲ. ಅದನ್ನು ಒಂದು ಟಿನ್ ಡಬ್ಬಿಯೊಳಗೆ ಜೋಪಾನವಾಗಿ ಕಾಯ್ದಿಡುತ್ತಿದ್ದರು. ಅನಂತರ ಆ ಎಲ್ಲ ಪುಟಾಣಿ ಚೂರುಗಳನ್ನೂ ಸೇರಿಸಿ, ಸ್ನಾನಕ್ಕಾಗಿ ಮತ್ತೆ ಉಪಯೋಗಿಸುತ್ತಿದ್ದರು! ಹಾಗೆಯೇ ಅವರು ಕ್ಷೌರದ ಬ್ಲೇಡನ್ನು, ಅದು ಮೊಟಕಾದ ಮೇಲೆ ಎಸೆಯುತ್ತಿರಲಿಲ್ಲ. ಅದನ್ನು ಚೂಪುಗೊಳಿಸಿ ಮತ್ತೆ ಉಪಯೋಗಿಸುತ್ತಿದ್ದರು. ಬ್ಲೇಡುಗಳನ್ನು ಚೂಪುಗೊಳಿಸಲೆಂದೇ ಅವರು ಒಂದು ಕಲ್ಲಿನ ತುಂಡನ್ನು ಇಟ್ಟುಕೊಂಡಿದ್ದರು!

ಸರಳತೆಯೆನ್ನುವುದು ಪೂಜ್ಯ ಸ್ವಾಮೀಜಿಯವರಿಗೆ ಸ್ವಭಾವಸಿದ್ಧವಾಗಿತ್ತು. ಕೇರಳದ ಒಂದು ರಾಜಮನೆತನದಲ್ಲಿ ಹುಟ್ಟಿದವರಾದರೂ, ಅವರು ತಮ್ಮ ಯೌವನದ ದಿನಗಳಲ್ಲಿಯೂ ಅತ್ಯಂತ ಸರಳ ಜೀವನವನ್ನೇ ಬಾಳಿದ್ದರು. ಅವರ ಪೂರ್ವಾಶ್ರಮದ ತಮ್ಮಂದಿರಾದ ಶ್ರೀ ಅಚ್ಯುತ ಮೆನನ್ ಕೆಲವೊಮ್ಮೆ ಮದ್ರಾಸ್ ಮಠದಲ್ಲಿ ತಂಗುತ್ತಿದ್ದರು. ಪ್ರಾರಂಭದ ದಿನಗಳಲ್ಲಿ ತಮ್ಮ ತಮ್ಮನಿಗೆ ಮಠದಲ್ಲಿ ಉಳಿದುಕೊಳ್ಳಲು ಮಾತ್ರವೇ ಸ್ವಾಮೀಜಿಯವರು ಅನುಮತಿ ಕೊಟ್ಟಿದ್ದರು. "ಊಟವನ್ನು ಹತ್ತಿರದ ಹೊಟೇಲ್‌ನಲ್ಲಿ ಮಾಡು" ಎಂದು ತಮ್ಮ ಸಹೋದರನಿಗೆ ಹೇಳುತ್ತಿದ್ದರು ಎಂದು ನಾನು ಕೇಳಿದ್ದೇನೆ. ಕೆಲವು ಸಂನ್ಯಾಸಿಗಳು ಹೋಗಿ, ತಮ್ಮ ಸಹೋದರನಿಗೆ ಮಠದಲ್ಲಿಯೇ ಪ್ರಸಾದ ತೆಗೆದುಕೊಳ್ಳಲು ಅನುಮತಿ ನೀಡಬೇಕೆಂದು ಸ್ವಾಮೀಜಿಯವರನ್ನು ಪ್ರಾರ್ಥಿಸಿಕೊಂಡರಂತೆ! ಅದಕ್ಕೆ ಸ್ವಾಮೀಜಿ ಹೀಗೆ ಹೇಳಿದರು: "ಮಠ ಇರುವುದು ಭಕ್ತರಿಗಾಗಿ. ಆತನು ನನ್ನ ಸಹೋದರ, ನಿಜ. ಆದರೆ ಅವನು ಭಕ್ತನೇನಲ್ಲ. ಆದ್ದರಿಂದ ಅವನು ಹೊರಗಡೆ ಊಟಮಾಡುವುದೇ ಸರಿ." ಅನಂತರ ಅನೇಕರು ಮತ್ತೆ ಮತ್ತೆ ಬೇಡಿಕೊಂಡಿದ್ದರಿಂದ, ಸ್ವಾಮೀಜಿ ತಮ್ಮ ಮನಸ್ಸು ಬದಲಾಯಿಸಿದರು; ತಮ್ಮ ಸಹೋದರನಿಗೆ ಮಠದಲ್ಲಿ ಊಟ ಮಾಡಲು ಅನುಮತಿ ಇತ್ತರು.

ಮಠದಲ್ಲಿ ಸ್ವಾಮೀಜಿಯವರ ಸಹೋದರ ವಾಸ್ತವ್ಯ ಹೂಡಿದ ಸಮಯದಲ್ಲಿ ನಾವು ಅವರೊಂದಿಗೆ ಮಾತುಕತೆ ನಡೆಸುತ್ತಿದ್ದೆವು. ಒಮ್ಮೆ ಪೂಜ್ಯ ಸ್ವಾಮೀಜಿಯವರ ಸರಳ ಜೀವನಶೈಲಿಯ ಬಗ್ಗೆ ಕೇಳಿದಾಗ ಅವರು ಹೀಗೆ ಹೇಳಿದರು: "ನಾವಿಬ್ಬರೂ ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದುತ್ತಿದ್ದೆವು. ಒಟ್ಟಿಗೆ ಕಾಲೇಜಿನ ಹಾಸ್ಟೆಲ್‌ನಲ್ಲಿ ತಂಗಿದ್ದೆವು. ಮನೆಯಿಂದ ನಮ್ಮಿಬ್ಬರಿಗೂ ಪ್ರತಿ ತಿಂಗಳೂ ಹಣವನ್ನು ಕಳಿಸುತ್ತಿದ್ದರು. ತಿಂಗಳು ಮುಗಿಯುವುದಕ್ಕಿಂತ ಮುಂಚೆಯೇ ನನ್ನ ಪಾಲಿನ ಹಣ ಖರ್ಚಾಗಿರುತ್ತಿತ್ತು. ಆದರೆ ನನ್ನ ಸಹೋದರ (ಪೂಜ್ಯ ಸ್ವಾಮೀಜಿ) ಮನೆಗೆ ಹೀಗೆ ಪತ್ರ ಬರೆಯುತ್ತಿದ್ದರು: 'ನನ್ನಲ್ಲಿ ಸ್ವಲ್ಪ ಹಣ ಇನ್ನೂ ಮಿಕ್ಕಿದೆ. ಈಗ ನೀವು ಹಣ ಕಳಿಸುವುದೇನೂ ಬೇಡ. ನನಗೆ ಇನ್ನಷ್ಟು ಬೇಕಾದಾಗ, ನಾನೇ ಪತ್ರ ಬರೆಯುತ್ತೇನೆ.'

ಇದಾದನಂತರ ನಮ್ಮ ತಾಯಿಯಿಂದ ನನಗೆ ಬೈಗುಳದ ಪತ್ರ ಬರುತ್ತಿತ್ತು: 'ನೀವಿಬ್ಬರೂ ಒಂದೇ ಹಾಸ್ಟೆಲ್‌ನಲ್ಲಿ ಇದ್ದೀರಿ. ಒಂದೇ ಕಾಲೇಜಿನಲ್ಲಿ ಓದುತ್ತಿದ್ದೀರಿ. ನಿನ್ನ ಅಣ್ಣನ ಹತ್ತಿರ ಇನ್ನೂ ಹಣ ಮಿಕ್ಕಿದೆ. ನಿನಗೆ ಕೊಟ್ಟ ಹಣವನ್ನು ಹೇಗೆ ತಾನೇ ನೀನು ಖರ್ಚುಮಾಡಿಬಿಟ್ಟೆ?' "

ಪೂಜ್ಯ ಸ್ವಾಮೀಜಿಯವರ ತಾಯಿ ಒಂದು ನಿರ್ದಿಷ್ಟ ಮೊತ್ತವನ್ನು ಪ್ರತಿ ತಿಂಗಳೂ ಕಳಿಸುತ್ತಿದ್ದರು. ಆ ಕಾಲದಲ್ಲಿ ಅವರು ತಿರುವನಂತಪುರ ಆಶ್ರಮದ ಅಧ್ಯಕ್ಷರಾಗಿದ್ದರು. ತಾಯಿಯವರು ಕಳುಹಿಸುತ್ತಿದ್ದ ಹಣದಲ್ಲಿ, ಅವರು ಕೇವಲ ಒಂದು ರೂಪಾಯಿಯನ್ನು ಮಾತ್ರ ತಮ್ಮ ಸಲುವಾಗಿ ಖರ್ಚು ಮಾಡುತ್ತಿದ್ದರು. ಉಳಿದದ್ದನ್ನು ಆಶ್ರಮದ ಹತ್ತಿರ ವಾಸಿಸುತ್ತಿದ್ದ ಬಡಜನರಿಗಾಗಿ ಖರ್ಚುಮಾಡುತ್ತಿದ್ದರು.

ಪೂಜ್ಯ ಸ್ವಾಮೀಜಿಯವರಿಗೆ ದೀರ್ಘಕಾಲದ ಆಚರಣೆಗಳು ಇಷ್ಟವಾಗುತ್ತಿರಲಿಲ್ಲ. ಅವುಗಳನ್ನು ಸರಳ ರೀತಿಯಲ್ಲಿ ಆಚರಿಸುವುದನ್ನು ಅವರು ಬಯಸುತ್ತಿದ್ದರು. ೧೯೮೮ರಲ್ಲಿ ಅವರು ಬೇಲೂರು ಮಠಕ್ಕೆ ಹೋದಾಗಿನ ಘಟನೆ ಇದು. ಅಲ್ಲಿನ ಒಬ್ಬ ಭಕ್ತರು ಶ್ರೀಮಾತೆಯವರ ಚಿತ್ರವನ್ನು ಅಲಂಕರಿಸಲು ಎರಡು ಬೆಲೆಬಾಳುವ ಸೀರೆಗಳನ್ನು ಕೊಡುಗೆಯಾಗಿ ನೀಡಿದ್ದರು. ಅವುಗಳಲ್ಲಿ ಒಂದು ಸೀರೆಯನ್ನು ಮದ್ರಾಸ್ ಮಠದಲ್ಲಿರುವ ಶ್ರೀಮಾತೆಯವರ ಫೋಟೋವನ್ನು ಅಲಂಕರಿಸುವುದಕ್ಕಾಗಿ ಪೂಜ್ಯ ಸ್ವಾಮಿ ತಪಸ್ಯಾನಂದಜಿ ಅವರಿಗೆ ನೀಡಲಾಯಿತು. ಈ ಸೀರೆಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಪೂಜ್ಯ ಸ್ವಾಮೀಜಿ ಹೀಗೆ ಹೇಳಿದರು: "ಏಕೋ ಏನೋ, ಶ್ರೀಮಾತೆಯವರ ಚಿತ್ರವನ್ನು ಇಂಥ ಬೆಲೆಬಾಳುವ ಸೀರೆಯಿಂದ ಅಲಂಕರಿಸುವ ಭಾವನೆಯೇ ನನಗೆ ಸರಿಕಾಣುವುದಿಲ್ಲ. ನಮಗೆ ಗೊತ್ತೇ ಇದೆ, ಶ್ರೀಮಾತೆಯವರು ತಮ್ಮ ಜೀವಿತಕಾಲದಲ್ಲಿ ಸರಳವಾದ ಸೀರೆಗಳನ್ನು ಉಟ್ಟುಕೊಳ್ಳುವುದಕ್ಕೇ ಇಷ್ಟಪಡುತ್ತಿದ್ದರು. ಏನಾದರಾಗಲಿ, ನೀನು ಕೊಡುತ್ತಿರುವ ಕಾರಣದಿಂದ ನಾನು ತೆಗೆದುಕೊಳ್ಳುತ್ತೇನೆ."

ಇನ್ನೊಂದು ಸಂದರ್ಭದಲ್ಲಿ, ಬೇಲೂರು ಮಠಕ್ಕೆ ಅವರು ತೆರಳುವ ಮೊದಲು, ಬೇಲೂರು ಮಠದಲ್ಲಿನ ಸ್ವಾಮಿ ಬ್ರಹ್ಮಾನಂದಜಿ ಮಹಾರಾಜ್ ಅವರ ದೇವಾಲಯದಲ್ಲಿದ್ದ ಶ್ರೀಕೃಷ್ಣನ ಬೆಳ್ಳಿಯ ವಿಗ್ರಹ ಮತ್ತು ಕೆಲವು ಬೆಳ್ಳಿಯ ಪಾತ್ರೆಗಳು ಕಳುವಾದವು. ಸ್ವಾಮಿ ತಪಸ್ಯಾನಂದಜಿ ಅವರು ಇದನ್ನು ಕೇಳಿ ಹೀಗೆ ಪ್ರತಿಕ್ರಿಯಿಸಿದರು: "ಬೆಳ್ಳಿಯ ಪದಾರ್ಥಗಳನ್ನು ಇಟ್ಟುಕೊಳ್ಳುವ ಮೂಲಕ ನಾವೇ ಕಳ್ಳರನ್ನು ಆಹ್ವಾನಿಸಿದ ಹಾಗೆ ಆಯಿತು. ಅವುಗಳು ಕಳುವಾದ ಮೇಲೆ ನಾವು ದುಃಖಪಡುತ್ತೇವೆ. ಇಂಥ ಬೆಲೆಬಾಳುವ ಪಾತ್ರೆಗಳಿಂದ ತಮ್ಮ ಪೂಜೆ ಮಾಡಬೇಕೆಂದು ಶ್ರೀರಾಮಕೃಷ್ಣರು ಹೇಳಿದ್ದಾರೆಂದು ನಾನು ನಂಬುವುದಿಲ್ಲ. ನಾವು ಮಾಡುವ ಸರಳ ಪೂಜೆಯನ್ನೇ ಅವರು ಸಂತೋಷದಿಂದ ಸ್ವೀಕರಿಸುತ್ತಾರೆ."

ಸ್ವಾಮೀಜಿಯವರು ಎಂಥ ಪರಿಸ್ಥಿತಿಯಲ್ಲಿಯೂ ಕ್ಷೋಭೆಗೊಳ್ಳುತ್ತಿರಲಿಲ್ಲ. ದೇಹಕ್ಕೆ ಉಂಟಾಗುತ್ತಿದ್ದ ಹಲವಾರು ಬಾಧೆಗಳು ಅವರ ಮೇಲೆ ಯಾವುದೇ ಪರಿಣಾಮವನ್ನೂ ಬೀರಲಿಲ್ಲ. ಒಮ್ಮೆ ಮೂತ್ರನಾಳದ ಶಸ್ತ್ರಚಿಕಿತ್ಸೆಗೆಂದು ಅವರನ್ನು ಚೆನ್ನೈ ನಗರದ ವಿಜಯಾ ಆಸ್ಪತ್ರೆಗೆ ಸೇರಿಸಲಾಯಿತು. ಅವರಿಗೆ ಅರಿವಳಿಕೆಯನ್ನು (anesthesia) ನೀಡಲಾಯಿತು. ಎಷ್ಟೇ ಪ್ರಯತ್ನಪಟ್ಟರೂ ಶಸ್ತ್ರಚಿಕಿತ್ಸೆ ಯಶಸ್ವಿಯಾಗಲಿಲ್ಲ. ಸಂನ್ಯಾಸಿಗಳು ಮತ್ತು ವೈದ್ಯರು ಈ ವಿಷಯವನ್ನು ಪೂಜ್ಯ ಸ್ವಾಮೀಜಿಯವರಿಗೆ ತಿಳಿಸುವುದಕ್ಕೆ ಹಿಂಜರಿದರು. ಆದರೆ ಸ್ವಾಮೀಜಿಯವರು ಅರಿವಳಿಕೆಯ ಮಂಪರಿನಿಂದ ಹೊರಬಂದ ಕೂಡಲೇ ಪರಿಸ್ಥಿತಿಯನ್ನು ಗ್ರಹಿಸಿದರು ಎಂದು ಕಾಣುತ್ತದೆ. ಅವರು ಸರಳವಾಗಿ ಹೀಗೆ ಹೇಳಿದರು: "ಏನು? ಶಸ್ತ್ರಚಿಕಿತ್ಸೆ ಸಫಲವಾಗಲಿಲ್ಲವೇನು?" ಇಡೀ ವಿಷಯವನ್ನು ಅವರು ಹಗುರವಾಗಿ ತೆಗೆದುಕೊಂಡರು.

ಸ್ವಾಮೀಜಿಯವರಿಗೆ ಸಮಯವು ಅತ್ಯಂತ ಅಮೂಲ್ಯದ್ದಾಗಿತ್ತು. ಮಠದ ಹೆಚ್ಚುವರಿ ಆಡಳಿತ ಜವಾಬ್ದಾರಿಗಳ ನಡುವೆಯೂ, ಅವರು ತಮ್ಮ ಬರವಣಿಗೆಯ ಕಾರ್ಯವನ್ನು ಮುಂದುವರೆಸಿದರು. ಜನರೊಡನೆ ಅವರು ಅನವಶ್ಯಕವಾಗಿ ಮಾತನಾಡುತ್ತ ಸಮಯವನ್ನು ವ್ಯರ್ಥಮಾಡುತ್ತಿರಲಿಲ್ಲ. ಕಛೇರಿಯಲ್ಲಿ ಕೂಡ, ಅವರು ತಮ್ಮ ಗ್ರಂಥರಚನೆಯ ಕಾರ್ಯದಲ್ಲಿ ನಿಮಗ್ನರಾಗಿರುತ್ತಿದ್ದರು. ಯಾರಾದರೂ ಉದ್ಯೋಗಿಗಳಾಗಲಿ, ಸ್ವಯಂಸೇವಕರಾಗಲಿ ಅಥವಾ ಭಕ್ತರಾಗಲಿ ದಿನವೂ ತಮಗೆ ಪ್ರಣಾಮಗಳನ್ನು ಮಾಡುವ ಅಭ್ಯಾಸವನ್ನು ಬೆಳೆಸಿಕೊಂಡಿದ್ದರೆ, ಹಾಗೆ ಮಾಡಬಾರದಾಗಿ ಅವರು ಮತ್ತೆ ಮತ್ತೆ ಹೇಳುತ್ತಿದ್ದರು. ಇದಲ್ಲದೆ, ಅವರು ಪ್ರಣಾಮ ಮಾಡಿದ ನಂತರ, "ಏನು ವಿಷಯ?" ಎಂದು ವಿಚಾರಿಸುತ್ತಿದ್ದರು. ಪ್ರಣಾಮ ಮಾಡಿದವರು, "ನಿಮ್ಮ ದರ್ಶನಕ್ಕಾಗಿ ಬಂದಿದ್ದೇನೆ, ಮಹಾರಾಜ್" ಎಂದು ಉತ್ತರ ಕೊಟ್ಟರೆ, ಸ್ವಾಮೀಜಿಯವರು ಒಡನೆ ತೀಕ್ಷ್ಣವಾಗಿ ಪ್ರತಿಕ್ರಿಯಿಸುತ್ತಿದ್ದರು: "ದರ್ಶನ ಆಯಿತಲ್ಲಾ. ಈಗ ನೀನು ಹೋಗಬಹುದು." ಕಾಡುಹರಟೆಯಲ್ಲಿ ಸಮಯವನ್ನು ಎಳ್ಳಷ್ಟೂ ವ್ಯರ್ಥಮಾಡದಿರುವ ಬಗ್ಗೆ ಅವರು ಯಾವತ್ತೂ ಜಾಗರೂಕತೆಯಿಂದ ಇರುತ್ತಿದ್ದರು.

ಪೂಜ್ಯ ಸ್ವಾಮೀಜಿಯವರ ಬರವಣಿಗೆಯ ಕೆಲಸವೆಂದರೆ, ಮುಖ್ಯವಾಗಿ, ಸಂಸ್ಕೃತ ಭಾಷೆಯಲ್ಲಿರುವ ಧಾರ್ಮಿಕ ಗ್ರಂಥಗಳನ್ನು ಇಂಗ್ಲಿಷಿಗೆ ಅನುವಾದ ಮಾಡುವುದೇ ಆಗಿತ್ತು. ಅವರ ಮೂಲಗ್ರಂಥಗಳು ಕೆಲವೇ. ಅವುಗಳಲ್ಲಿ ಇಂಗ್ಲಿಷಿನಲ್ಲಿನ ಶ್ರೀಮಾತೆಯವರ ಮೊಟ್ಟಮೊದಲ ಅಧಿಕೃತ ಜೀವನಚರಿತ್ರೆಯಾದ Holy Mother Sri Sarada Devi ಯೂ ಸೇರಿದೆ. ಇದಲ್ಲದೆ ಅವರ ಇನ್ನೊಂದು ವಿಶಿಷ್ಟ ಕೃತಿಯೆಂದರೆ, Bhakti Schools of Vedanta. ಇದೂ ಒಂದು ಮೂಲಗ್ರಂಥ. ಇದಲ್ಲದೆ, ಅನುವಾದಗಳು ಹಲವಾರು ಇವೆ. ಶ್ರೀಮದ್ಭಾಗವತಮ್, ಅಧ್ಯಾತ್ಮ ರಾಮಾಯಣ, ಸುಂದರಕಾಂಡಮ್, ನಾರಾಯಣೀಯಂ, ಭಕ್ತಿ ರತ್ನಾವಳಿ, ಸ್ತೋತ್ರರತ್ನ, ಆರತಿ ಮತ್ತು ರಾಮನಾಮ್ – ಇವುಗಳು ಸ್ವಾಮೀಜಿಯವರ ಅನುವಾದ ಗ್ರಂಥಗಳಲ್ಲಿ ಪ್ರಮುಖವಾದವು. ಒಮ್ಮೆ ಒಬ್ಬರು, "ನೀವು ಹೆಚ್ಚಾಗಿ ಅನುವಾದ ಕಾರ್ಯವನ್ನೇ ಮಾಡುತ್ತಿರುವುದೇಕೆ?" ಎಂದು ಕೇಳಿದರು. ಅದಕ್ಕೆ ಸ್ವಾಮೀಜಿ

ವಿನಯದಿಂದ ಉತ್ತರಿಸಿದರು, "ಯಾವ ಹೊಸ ಸಂಗತಿಯನ್ನು ತಾನೇ ನಾನು ಬರೆಯಬಲ್ಲೆ? ನಮ್ಮ ಮಹಾನ್ ಸಂತರು ಬೇಕಾದಷ್ಟು ಆಧ್ಯಾತ್ಮಿಕ ಸಂಪತ್ತನ್ನು ನಮಗಾಗಿ ಬಿಟ್ಟುಹೋಗಿದ್ದಾರೆ. ಇವುಗಳನ್ನು ಅನುವಾದ ಮಾಡಿ, ಹೆಚ್ಚಿನ ಜನರಿಗೆ ಒದಗಿಸುವ ಕಾರ್ಯ ನಿಜವಾಗಿಯೂ ಸೌಭಾಗ್ಯವಲ್ಲವೇ? ಇದೇ ಒಂದು ದೃಷ್ಟಿಯಲ್ಲಿ, ಆಧ್ಯಾತ್ಮಿಕ ಸಾಧನೆಯಲ್ಲವೇ?" ರಾಮಕೃಷ್ಣ ಮಹಾಸಂಘದ ಒಬ್ಬ ಶ್ರೇಷ್ಠ ವಿದ್ವಾಂಸರಾದ ಸ್ವಾಮೀಜಿಯವರದು ಎಂಥ ವಿನಯವಂತಿಕೆ ಮತ್ತು ಉದಾರಹೃದಯ! ಅವರು ಬ್ರಹ್ಮಚಾರಿಯಾಗಿದ್ದಾಗಲೇ, ಮದ್ರಾಸ್ ಮಠದಿಂದ ಪ್ರಕಟವಾಗುತ್ತಿರುವ 'ವೇದಾಂತಕೇಸರಿ' ಆಂಗ್ಲಪತ್ರಿಕೆಯ ಸಂಪಾದಕರಾಗಿದ್ದರು. ಪೂಜ್ಯ ಸ್ವಾಮೀಜಿಯವರ ಸಂಪಾದಕೀಯಗಳು ಅವರ ಅಗಾಧ ವಿದ್ವತ್ತಿಗೆ ಹಿಡಿದ ಕೈಗನ್ನಡಿಗಳಾಗಿವೆ.

ರಾಮಕೃಷ್ಣ ಮಹಾಸಂಘದ ಹಿಂದಿನ ಸಹಾಯಕ ಕಾರ್ಯದರ್ಶಿಗಳೂ ಮತ್ತು ಬಳಿಕ ರಾಮಕೃಷ್ಣ ಮಹಾಸಂಘದ ಹದಿನಾಲ್ಕನೆಯ ಅಧ್ಯಕ್ಷರೂ ಆಗಿದ್ದ ಪರಮಪೂಜ್ಯ ಸ್ವಾಮಿ ಗಹನಾನಂದಜಿ ಮಹಾರಾಜ್ ಅವರು ಪೂಜ್ಯ ತಪಸ್ಯಾನಂದಜಿ ಮಹಾರಾಜರು ಶ್ರೀರಾಮಕೃಷ್ಣರನ್ನು ಕುರಿತು ಬರೆದ ಸಂಪಾದಕೀಯಗಳನ್ನು ಸಂಗ್ರಹಿಸಿ, ಪುಸ್ತಕರೂಪದಲ್ಲಿ ತರುವ ವಿಷಯದಲ್ಲಿ ತೀವ್ರ ಆಸಕ್ತಿಯನ್ನು ಹೊಂದಿದ್ದರು. ಇದರ ಬಗ್ಗೆ ಅವರು ಸ್ವಾಮೀಜಿಯವರ ಜೊತೆಗೆ ಹಲವಾರು ಸಂದರ್ಭಗಳಲ್ಲಿ ಮಾತನಾಡಿದ್ದರು. ಆದರೆ ಸ್ವಾಮೀಜಿಯವರು ಯಾವತ್ತೂ ಈ ಪ್ರಸ್ತಾಪಕ್ಕೆ ಒಪ್ಪಿಗೆ ನೀಡಲೇ ಇಲ್ಲ. ಅವರು ಹೀಗೆ ಹೇಳುತ್ತಿದ್ದರು, "ಆ ಸಂಪಾದಕೀಯಗಳನ್ನು ನಾನು ಬರೆದದ್ದು, ನನ್ನ ಪ್ರಾರಂಭಿಕ ದಿನಗಳಲ್ಲಿ. ಅವುಗಳನ್ನು ಪ್ರಕಟಿಸುವ ಯಾವ ಇಚ್ಛೆಯೂ ನನಗಿಲ್ಲ." ಆದರೆ ಪೂಜ್ಯ ಸ್ವಾಮಿ ಗಹನಾನಂದಜಿ ಅವರು ತಮ್ಮ ಪ್ರಯತ್ನವನ್ನು ಕೈಬಿಡಲಿಲ್ಲ. ಪೂಜ್ಯ ಸ್ವಾಮಿ ತಪಸ್ಯಾನಂದಜಿ ಅವರ ದೇಹಾಂತ್ಯವಾದ ನಂತರ, ಅವುಗಳನ್ನು ಮದ್ರಾಸ್ ಮಠದ ಮೂಲಕ ಪ್ರಕಟಿಸಲು ವ್ಯವಸ್ಥೆ ಮಾಡಿದರು. ಆ ಪುಸ್ತಕದ ಹೆಸರು, Sri Ramakrishna's Thoughts on Man, World and God ಎಂದು. ಈ ಗ್ರಂಥವು ಪೂಜ್ಯ ಸ್ವಾಮೀಜಿಯವರ ವಿದ್ವತ್ತಿನ ಗಾಢತೆ ಮತ್ತು ವ್ಯಾಪಕತೆಗಳನ್ನು ಸ್ಪಷ್ಟವಾಗಿ ಪ್ರತಿಫಲಿಸುತ್ತದೆ.

ಇತರರ ಮಧ್ಯೆ, ಪೂಜ್ಯ ಸ್ವಾಮಿ ತಪಸ್ಯಾನಂದಜಿ ಅವರನ್ನು ವಿಶಿಷ್ಟವಾಗಿಸಿರುವುದು, ಶ್ರೀರಾಮಕೃಷ್ಣರಲ್ಲಿ ಅವರಿಗಿದ್ದ ಶ್ರದ್ಧಾಭಕ್ತಿಗಳು. ಅವರ ಇಡೀ ಜೀವನವೇ ಶ್ರೀರಾಮಕೃಷ್ಣರ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿತ್ತು. ಶ್ರೀರಾಮಕೃಷ್ಣರನ್ನು ಅವರು ಸಾಮಾನ್ಯವಾಗಿ, 'ಗುರುದೇವ' (Great Master) ಎಂದೇ ಕರೆಯುತ್ತಿದ್ದರು. ಆ ಪದವನ್ನು ಅವರು ಉಚ್ಚರಿಸುವ ರೀತಿಯೇ, ಶ್ರೀರಾಮಕೃಷ್ಣರಲ್ಲಿ ಅವರಿಗಿದ್ದ ಭಕ್ತಿ ಹಾಗೂ ಗೌರವಗಳ ಗಾಢತೆಯನ್ನು ಪ್ರದರ್ಶಿಸುತ್ತಿತ್ತು. ಪ್ರತಿದಿನ ಬೆಳಗ್ಗೆ ನಾಲ್ಕು ಗಂಟೆಗೆ, ಅವರು ತಮ್ಮ ಮಂಚದ ಮೇಲೆ ಕುಳಿತುಕೊಂಡು, ಶ್ರೀರಾಮಕೃಷ್ಣರ ಕುರಿತಾದ ಸ್ತೋತ್ರಗಳನ್ನು ಹೇಳಿಕೊಳ್ಳುತ್ತಿದ್ದರು. ಆಗ ಅವರ ಕಣ್ಣುಗಳಿಂದ ಅಶ್ರುಧಾರೆ ಹರಿಯುತ್ತಿತ್ತು ಮತ್ತು ಅವರ ಧ್ವನಿಯು ಭಾವದಿಂದ ಗದ್ಗದಿತವಾಗುತ್ತಿತ್ತು.

ನಂತರದ ದಿನಗಳಲ್ಲಿ, ಅವರಿಗೆ ನೆಲದ ಮೇಲೆ ಬಗ್ಗಿ ನಮಸ್ಕಾರ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆದರೂ ಅವರು ಪ್ರತಿದಿನ ಬೆಳಗ್ಗೆ ೯.೩೦ ಗಂಟೆಗೆ, ಕಛೇರಿಗೆ ಬರುವ ವೇಳೆಯಲ್ಲಿ, ದೇವಾಲಯದಲ್ಲಿನ ಶ್ರೀರಾಮಕೃಷ್ಣರ ಚಿತ್ರದ ಮುಂದೆ ದೀರ್ಘಕಾಲ ನಿಂತುಕೊಂಡು ಗೌರವ ಸಲ್ಲಿಸುತ್ತಿದ್ದರು. ಒಂದು ದಿನ ಕೂಡ ಇದನ್ನು ಅವರು ತಪ್ಪಿಸುತ್ತಿರಲಿಲ್ಲ.

ಪೂಜ್ಯ ಸ್ವಾಮಿ ತಪಸ್ಯಾನಂದಜಿ ಅವರು, ಎಲ್ಲ ಪರಿಸ್ಥಿತಿಗಳಲ್ಲಿಯೂ ಶ್ರೀರಾಮಕೃಷ್ಣರ ಜೀವಂತ ಸಾನ್ನಿಧ್ಯದಲ್ಲಿ ಮತ್ತು ಅವರ ಅನುಗ್ರಹ ಶಕ್ತಿಯಲ್ಲಿ, ಅವಿಚಲ ಶ್ರದ್ಧೆಯನ್ನು ಹೊಂದಿದ್ದರು. ಒಮ್ಮೆ ಅವರು ಒಂದು ಹತ್ತಿರದ ಊರಿಗೆ (ಪ್ರಾಯಶಃ ಚೆಂಗಲಪಟ್ಟು) ರೈಲಿನಲ್ಲಿ ಹೊರಟಿದ್ದರು. ಎಂದಿನಂತೆ, ಅವರೊಬ್ಬರೇ ಹೊರಟರು. ಯಾರನ್ನೂ ಜೊತೆಗೆ ಕೊಂಡೊಯ್ಯಲಿಲ್ಲ. ಅವರು ಹಾಗೆ ತೆರಳುತ್ತಿದ್ದಾಗ, ಸ್ವಲ್ಪ ಹಣವನ್ನು ಇಟ್ಟುಕೊಳ್ಳುವಂತೆ ಮ್ಯಾನೇಜರ್ ಸ್ವಾಮಿಗಳು ಅವರನ್ನು ಪ್ರಾರ್ಥಿಸಿದರು. ಇದಕ್ಕೆ ಪೂಜ್ಯ ಸ್ವಾಮೀಜಿಯವರು ಉತ್ತರಿಸಿದರು: "ನೀವೆಲ್ಲರೂ ನನ್ನನ್ನು ಕಾರಿನಲ್ಲಿ ರೈಲ್ವೆ ನಿಲ್ದಾಣದ ತನಕ ಕರೆದುಕೊಂಡು ಹೋಗುತ್ತಿದ್ದೀರಿ. ಅಲ್ಲಿಯೂ ನನ್ನನ್ನು ಯಾರಾದರೂ ಸ್ವಾಗತಿಸಿ, ಹೋಗಬೇಕಾದ ಕಡೆಗೆ ಕರೆದುಕೊಂಡು ಹೋಗುತ್ತಾರೆ. ಪ್ರಯಾಣ ಕಾಲವೂ ಎರಡು ಗಂಟೆಗಿಂತ ಹೆಚ್ಚೇನಿಲ್ಲ. ಹೀಗಾಗಿ ಹಣದ ಆವಶ್ಯಕತೆಯಾದರೂ ಏನಿದೆ?" ಇದಕ್ಕೆ, ಮ್ಯಾನೇಜರ್ ಸ್ವಾಮಿಗಳು ಹೇಳಿದರು, "ಏನಾದರೂ ತಡವಾದರೆ ಅಥವಾ ದಾರಿಯಲ್ಲಿ ನಿಮಗೆ ಏನಾದರೂ ತಿನ್ನಬೇಕು ಅನ್ನಿಸಿದರೆ..." ಸ್ವಾಮೀಜಿ ಒಂದು ಕ್ಷಣ ಮೌನವಾಗಿದ್ದರು. ಅನಂತರ ಭಾವುಕರಾಗಿ ಹೀಗೆ ನುಡಿದರು: "ಓಹೋ! ನಾವೆಲ್ಲ ಶ್ರೀ ಗುರುಮಹಾರಾಜರ ಅಸ್ತಿತ್ವವನ್ನೇ ಮರೆತುಬಿಟ್ಟ ಹಾಗೆ ಇದೆಯಲ್ಲಾ!" ಶ್ರೀರಾಮಕೃಷ್ಣರು ತಮ್ಮ ಅಗತ್ಯಗಳನ್ನು ಎಲ್ಲ ಸಮಯದಲ್ಲಿಯೂ ಪೂರೈಸುವರೆಂಬ ಸಂಪೂರ್ಣ ಶ್ರದ್ಧೆಯನ್ನು ಸ್ವಾಮೀಜಿ ಹೊಂದಿದ್ದರು.

**ಸರಳತೆ, ತಪಸ್ಸು, ಪವಿತ್ರತೆ** – ಈ ಸದ್ಗುಣಗಳು ಭಗವಂತನಲ್ಲಿ ಸಂಪೂರ್ಣ ಶರಣಾಗತ ಭಾವವನ್ನು ಹೊಂದಿರುವ ಭಕ್ತನಲ್ಲಿ ತಾನೇ ತಾನಾಗಿ ಮೂಡಿರುತ್ತವೆ. ಇವು ಪೂಜ್ಯ ಸ್ವಾಮಿ ತಪಸ್ಯಾನಂದಜಿ ಮಹಾರಾಜರಿಗೆ ಅತ್ಯಂತ ಸಹಜ ಗುಣಗಳಾಗಿದ್ದವು.

**ಉಪಸಂಹಾರ:** ನಮ್ಮ ಸಂಘದ ಒಬ್ಬ ಸಂನ್ಯಾಸಿಗಳು ಹೀಗೆ ಉದ್ಗಾರವೆತ್ತಿದರು: "ಪೂಜ್ಯ ಸ್ವಾಮಿ ತಪಸ್ಯಾನಂದಜಿ ಅವರನ್ನು ಕುರಿತು ಧ್ಯಾನಿಸುವುದು ಮತ್ತು ಅವರ ಬಗ್ಗೆ ಬರೆಯುವುದು ಒಂದು ವಿರಳವಾದ ಸೌಭಾಗ್ಯವೆಂದು ನಾನು ಪರಿಗಣಿಸುತ್ತೇನೆ. ಏಕೆಂದರೆ, ನಾನೀಗ ಏನಾಗಿದ್ದೇನೆಯೋ, ಅದು ಅವರ ಕೊಡುಗೆ ಮಾತ್ರ."

ಪೂಜ್ಯ ಸ್ವಾಮೀಜಿಯವರ ನೆನಪುಗಳನ್ನು ಇದೇ ಬಗೆಯ ಸಂವೇದನೆ ಮತ್ತು ಭಾವನೆಗಳೊಂದಿಗೆ ನಾನು ಸಮಾಪ್ತಗೊಳಿಸುತ್ತೇನೆ.